ಇ) ಲೋಕೋಪಯೋಗಿ ಇಲಾಖೆ ಕಲಬುರಗಿ ವಿಭಾಗದಲ್ಲಿ 1 ಕಾಮಗಾರಿ ಹಾಗೂ ಸೇಡಂ ವಿಭಾಗದಲ್ಲಿ 4 ಕಾಮಗಾರಿಗಳನ್ನು ರದ್ದುಪಡಿಸಿ ಪುನಃ ಟೆಂಡರ್ ಕರೆಯಲಾಗಿದೆ.

**ಬೆಳೆ ವಿಮೆ ಯೋಜನೆ**

**1841(1992); ಶ್ರೀ ದತ್ತಾತ್ರೇಯ ಸಿ. ಪಾಟೀಲ ರೇವೂರ (ಅಪ್ಪುಗೌಡ)**

ಅ) ಸರ್ಕಾರ ಮಾರ್ಗಸೂಚಿಯಂತೆ ಬೆಳೆ ವಿಮೆ ಯೋಜನೆ ರಾಜ್ಯದಲ್ಲಿ ಜಾರಿಗೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ವಿಮೆ ಮಂಜೂರು ಮಾಡಲಾಗಿದೆ;

ಇ) ಮಾರ್ಗಸೂಚಿಯಂತೆ ಖಾಸಗಿ ವಿಮಾ ಕಂಪನಿಗಳು ಈ ವಿಷಯದಲ್ಲಿ ರೈತರಿಗೆ ಸಹಕರಿಸುತ್ತಿವೆಯೇ?

ಈ) ಹಾಗಿದ್ದಲ್ಲಿ, ಕಲಬುರಗಿ ಜಿಲ್ಲೆಗೆ ಎಷ್ಟು ಬೆಳೆ ವಿಮೆ ಜಾರಿಯಾಗಿದೆ?

**ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು)**

ಅ) ಹೌದು, ಬೆಳೆ ವಿಮಾ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ರಾಜ್ಯದಲ್ಲಿ

1. ರಾಷ್ಟ್ರೀಯ ಕೃಷಿ ವಿಮಾ ಯೋಜನೆ (2000–01 ರಿಂದ 2013ರ ಮುಂಗಾರು),
2. ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ (2007ರ ಮುಂಗಾರಿನಿಂದ ಇಲ್ಲಿಯವರೆಗೆ) ಮತ್ತು
3. ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಗಳನ್ನು (ಪ್ರಾಯೋಗಿಕವಾಗಿ 4 ಜಿಲ್ಲೆಗಳಲ್ಲಿ 2010–11ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಿಂದ 2013ರ ಮುಂಗಾರು & 2013–14ರ

ಹಿಂಗಾರು ಮತ್ತು ಬೇಸಿಗೆ ಹಂಗಾಮಿನಿಂದ ಇಲ್ಲೆಯವರೆಗೆ) ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

2014–15ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯನ್ನು ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ಮತ್ತು ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯನ್ನು ಉಡುಪಿ ಜಿಲ್ಲೆಯನ್ನು ಹೊರತುಪಡಿಸಿ ಉಳಿದ ಎಲ್ಲಾ 29 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಹಿಂಗಾರು ಬೇಸಿಗೆ ಹಂಗಾಮಿನಲ್ಲಿ ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆ ಮತ್ತು ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆಯನ್ನು ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಆ)

(₹ ಲಕ್ಷಗಳಲ್ಲಿ)

| ಯೋಜನೆ | ಅವಧಿ | ಪಾಲ್ಗೊಂಡ ರೈತರು | ಪಾವತಿಸಿದ ವಿಮಾ ಕಂತು | ಫಲಾನುಭವಿ ರೈತರ ಸಂಖ್ಯೆ | ಪಡೆದ ಪರಿಹಾರ ಮೊತ್ತ |
|---|---|---|---|---|---|
| ರಾಷ್ಟ್ರೀಯ ಕೃಷಿ ವಿಮಾ ಯೋಜನೆ | 2000–01ನೇ ಸಾಲಿನಿಂದ 2013–14ರ ಮುಂಗಾರು ಹಂಗಾಮು | 131.63 ಲಕ್ಷ | 48395.56 | 49.03 ಲಕ್ಷ | 195532.29 |
| ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ | 2007ರ ಮುಂಗಾರಿನಿಂದ 2013–14 ರ ಹಿಂಗಾರು ಹಂಗಾಮು | 8.21 ಲಕ್ಷ | 5716.73 | 6.80 ಲಕ್ಷ | 12196.05 |
| ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆ | 2010–11ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಿಂದ 2013–14ರ ಮುಂಗಾರು ಹಂಗಾಮು | ರಾಜ್ಯದ 4 ಜಿಲ್ಲೆಗಳ 5.76 ಲಕ್ಷ | 7412.18 | 1.20 ಲಕ್ಷ | 8575.03 |

| | | | | | |
|---|---|---|---|---|---|
| ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆ | 2013–14ರ ಹಿಂಗಾರು ಮತ್ತು ಬೇಸಿಗೆ ಹಂಗಾಮು | ರಾಜ್ಯದ ಎಲ್ಲಾ ಜಿಲ್ಲೆಗಳ 0.52 ಲಕ್ಷ | 354.16 | 0.16 ಲಕ್ಷ | 346.40 |

ಇ) ಹೌದು. ಮಾರ್ಗಸೂಚಿಯಂತೆ ಖಾಸಗಿ ವಿಮಾ ಕಂಪನಿಗಳು ಈ ವಿಷಯದಲ್ಲಿ ರೈತರಿಗೆ ಸಹಕರಿಸುತ್ತಿವೆ.

ಈ) ಒಟ್ಟು ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿ 2000–01 ನೇ ಸಾಲಿನಿಂದ 2013–14ರ ಮುಂಗಾರು ಹಂಗಾಮಿನವರೆಗೆ 3.26 ಲಕ್ಷ ಫಲಾನುಭವಿ ರೈತರಿಗೆ ₹ 18930.70 ಲಕ್ಷಗಳ ಬೆಳೆ ವಿಮಾ ನಷ್ಟ ಪರಿಹಾರವನ್ನು ಪಾವತಿಸಲಾಗಿದೆ.

ಖಾಸಗಿ ಸಂಸ್ಥೆಗಳಿಗೆ ಸಂಬಂಧಿಸಿದಂತೆ, 2011–12ನೇ ಹಿಂಗಾರು ಹಂಗಾಮಿನಲ್ಲಿ ICICI Lombard General Insurance Company ಪಾಲ್ಗೊಂಡಿದ್ದು, 17055 ರೈತರಿಗೆ ₹ 978.81 ಲಕ್ಷ ವಿಮಾ ನಷ್ಟ ಪರಿಹಾರ ನೀಡಲಾಗಿದೆ.

ಉಳಿದ ವರ್ಷಗಳಲ್ಲಿ ಭಾರತ ಸರ್ಕಾರದ ಅಂಗ ಸಂಸ್ಥೆಯಾದ AIC ಯವರು ವಿಮಾ ಯೋಜನೆಯನ್ನು ಜಾರಿಗೊಳಿಸಿದ್ದು 308945 ರೈತರಿಗೆ 17951.89 ಲಕ್ಷ ರೂ.ಗಳ ವಿಮಾ ನಷ್ಟ ಪರಿಹಾರ ನೀಡಲಾಗಿದೆ.

**ಸಂಪರ್ಕ ಸೇತುವೆಗಳನ್ನು ನಿರ್ಮಿಸುವ ಕುರಿತು**

**1843(1379); ಶ್ರೀ ದೊಡ್ಡಮನಿ ರಾಮಕೃಷ್ಣ ಸಿದ್ದಲಿಂಗಪ್ಪ (ಶಿರಹಟ್ಟಿ)**

ಅ) ಶಿರಹಟ್ಟಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆಗೆ ಸಂಪರ್ಕ ಸೇತುವೆಗಳನ್ನು ನಿರ್ಮಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಅವುಗಳು ಯಾವುವು;